**ಓ.ಎಸ್. ನಂ.  42/2019** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ  26.7.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀಮತಿ ಎನ್.ಎಸ್ ವಕೀಲರಿಂದಃ</u>

ದಾವಆಸ್ತಿಗಳು 3 ತಲೆಮಾರುನಿಂದ ಬಂದಿರುವ ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸಾಕ್ಷಿದಾರರು ಪಿತ್ರಾರ್ಜಿತ ಆಸ್ತಿಯ ಆದಾಯದಿಂದ ಖರೀದಿಸಿರುವ ಆಸ್ತಿ ಎನ್ನುವರು.  ದಾವಆಸ್ತಿಗಳನ್ನು ನನ್ನ ಮುತ್ತಜ್ಜ ಹೊನ್ನೇಗೌಡರ ಆಸ್ತಿಯ ಆದಾಯದಿಂದ ಖರೀದಿ ಮಾಡಿರುತ್ತಾರೆ.  ಹೊನ್ನೇಗೌಡರಿಗೆ ಸಂಬಂಧಪಟ್ಟ ಆಸ್ತಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.  ನಾನು ಮುತ್ತಾತ ಹೊನ್ನೇಗೌಡರಿಗೆ ಸಂಬಂಧಿಸಿದ ಆಸ್ತಿಯ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಸದಸ್ಯರು ಯಾರು ಯಾರು ಎಂದರೆ ಸಾಕ್ಷಿದಾರರು ಕಲ್ಯಾಣೇಗೌಡ, ಚಲುವರಾಜು, ಚಂದ್ರಶೇಖರ್, ಶಿವರಾಜು, ರಾಮಚಂದ್ರು, ಹೊನ್ನೇಗೌಡ, ಜಯಮ್ಮ, ಶಿವಕುಮಾರ್ ಆಗಿರುತ್ತಾರೆ.  ಚನ್ನೇಗೌಡ, ನಿಂಗಮ್ಮ, ಹೊನ್ನೇಗೌಡ ಮತ್ತು ರಾಮಚಂದ್ರ ರವರು ಯಾವಾಗ ತೀರಿಕೊಂಡಿರುತ್ತಾರೆ ಮತ್ತು ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಗೊತ್ತಿರುತ್ತದೆ, ಚನ್ನೇಗೌಡ ಮತ್ತು ನಿಂಗಮ್ಮ ರವರು 2006-2007 ರಲ್ಲಿ ಒಂದೇ ದಿನ ಆತ್ಮಹತ್ಯೆ ಮಾಡಿಕೊಂಡು ತೀರಿಕೊಂಡಿರುತ್ತಾರೆ, ಹೊನ್ನೇಗೌಡ ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ, ರಾಮಚಂದ್ರರವರು 2016 ರಲ್ಲಿ ತೀರಿಕೊಂಡಿರುತ್ತಾರೆ, ದಿನಾಂಕ ಮತ್ತು ತಿಂಗಳು ಗೊತ್ತಿರುವುದಿಲ್ಲ.  ವಾದಪತ್ರದಲ್ಲಿ ಬೇರೆ ಬೇರೆ ವಾಸ ಮಾಡಿಕೊಂಡಿರುತ್ತೀರಿ ಎಂದು ನಮೂದಿಸಿದ್ದು, ಎಷ್ಟು ವರ್ಷದಿಂದ ಬೇರೆ ಬೇರೆಯಾಗಿ ವಾಸವಾಗಿರುತ್ತೀರಿ ಎಂದರೆ ಒಟ್ಟು ಕುಟುಂಬದಲ್ಲಿದ್ದು ಕಳೆದ 7-8 ವರ್ಷದಿಂದ ಬೇರೆ ಬೇರೆ ಮನೆ ಮಾಡಿಕೊಂಡಿರುತ್ತೇವೆ ಎನ್ನುವರು.  1982 ರಲ್ಲಿ ನನ್ನ ತಂದೆ ಚಾಮನಹಳ್ಳಿ ಗ್ರಾಮದ ಸರ್ವೆ ನಂ.8 ರಲ್ಲಿ ಅವರ ಭಾಗಾಂಶದ 4 ಎಕರೆ ಆಸ್ತಿಯನ್ನು ಪಡೆದುಕೊಂಡು ಬೇರೆಯಾಗಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.  1982 ರಲ್ಲಿ ನನ್ನ ತಂದೆ ಮಾತ್ರ ಪ್ರಾಪ್ತ ವಯಸ್ಕರಾಗಿದ್ದು, ಚನ್ನೇಗೌಡರ ಉಳಿದ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.8 ರಲ್ಲಿ ಒಟ್ಟು 4 ಎಕರೆ ಜಮೀನು ಇರುತ್ತದೆ.  ನಿಪಿ17 ರಂತೆ ಸರ್ವೆ ನಂ.8 ರಲ್ಲಿ ಒಟ್ಟು 39-30 ಎಕರೆ ಜಮೀನು ಇರುತ್ತದೆ ಎಂದರೆ ಸರಿ, ಸಾಕ್ಷಿದಾರರು ಮುಂದುವರಿದು ಅದರ ಪೈಕಿ 4 ಎಕರೆ ನಮ್ಮ ಕುಟುಂಬಕ್ಕೆ ಸೇರಿರುತ್ತದೆ ಎನ್ನುವರು. ಸರ್ವೆ ನಂ.8 ರಲ್ಲಿ ಚನ್ನೇಗೌಡರಿಗೆ 2 ಎಕರೆ ಮಾತ್ರ ಮಂಜೂರಾಗಿರುತ್ತದೆ ಎಂದರೆ ಸರಿ.  ಚನ್ನೇಗೌಡರು ಬಗರ್‌ಹುಕುಂ ಮಾಡುತ್ತಿದ್ದ 2 ಎಕರೆ ಜಮೀನು ಚನ್ನೇಗೌಡರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ.  ಕಲ್ಯಾಣೇಗೌಡರು 1982 ರಲ್ಲಿ ಭಾಗ ಪಡೆದ ನಂತರ ದಾವ 7 ನೇ ಐಟಂ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯರು ಸಾಗುವಳಿ ಮಾಡುತ್ತಿದ್ದರಿಂದ ಅವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿದಾರರು ವಿಭಾಗವಾಗಿರಲಿಲ್ಲ ಎನ್ನುವರು. 1 ನೇ ಪ್ರತಿವಾದಿಯು ಪ್ರತಿ ತಿಂಗಳು ಎಲ್ಲರ ಕುಟುಂಬಕ್ಕೆ 3 ಸಾವಿರ ಹಣವನ್ನು ನೀಡುತ್ತಾರೆ.

ಈಗ ನೋಡುತ್ತಿರುವ ದಾಖಲೆಯು ದಿನಾಂಕ 11.1.1993 ರಂದು ನನ್ನ ತಂದೆ ಕಾಳೇಗೌಡರಿಗೆ ಮಾರಾಟ ಮಾಡಿರುವ ಸರ್ವೆ ನಂ.8/2 ರ 4 ಎಕರೆ ಆಸ್ತಿಯ ಕ್ರಯಪತ್ರ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ರಲ್ಲಿ ನನ್ನ ಕುಟುಂಬದ ಅವಶ್ಯಕತೆಗೆ ಮತ್ತು ಸಾಲ ತೀರಿಸಲು ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿದಾರರು ಸದರಿ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು, ನನ್ನ ಕುಟುಂಬ ಎಂದರೆ ಅವರ ತಂದೆ ತಾಯಿ, ಅಣ್ಣ, ತಮ್ಮದಿಂರ ಖರ್ಚು ಎಂದು ನುಡಿಯುತ್ತಾರೆ. ನಿಡಿ1 ಕ್ರಯಪತ್ರವಾದಾಗ ನನ್ನ ತಂದೆ ಮತ್ತು ನನ್ನ ಅಜ್ಜ ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು. ನಿಡಿ1 ರ ಆಸ್ತಿಯು ಸ್ವಯಾರ್ಜಿತ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸುತ್ತೇನೆ. ನನ್ನ ತಂದೆ ಅವರ ಭಾಗಾಂಶದ ಆಸ್ತಿಯನ್ನು ನಿಡಿ1 ಪ್ರಕಾರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ1 ರಲ್ಲಿ ಹೇಳಿರುವ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಸದರಿ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎನ್ನುವರು. ಈಗ ನೋಡುತ್ತಿರುವ ಕಂದೇಗಾಲ ಗ್ರಾಮದ ಸರ್ವೆ ನಂ.60 ಮತ್ತು 61 ರ ಕ್ರಯಪತ್ರ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ2 ಎಂದು ಗುರುತಿಸಲಾಯಿತು. ನಿಡಿ2 ರಲ್ಲಿ ಚನ್ನೇಗೌಡ, ಚಂದ್ರಶೇಖರ ಮತ್ತು ಶಿವರಾಜು ರವರು ಅಪ್ರಾಪ್ತ ವಯಸ್ಕರು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ2 ರಲ್ಲಿ ಕಲ್ಯಾಣೇಗೌಡರ ಮದುವೆ ಮತ್ತು ಚನ್ನೇಗೌಡರ ಹೆಣ್ಣು ಮಕ್ಕಳ ಮದುವೆ ಸಾಲ ತೀರಿಸಲು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ2 ರ ಆಸ್ತಿಯನ್ನು ಅಪ್ರಾಪ್ತ ಮಕ್ಕಳ ಪಾಲನೆ ಪೋಷಣೆ ಮತ್ತು ವಿದ್ಯಾಭ್ಯಾಸಕ್ಕೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ2 ರ ಆಸ್ತಿಯನ್ನು ಮಾರಾಟ ಮಾಡಿದ ಹಣವನ್ನು ನನ್ನ ತಂದೆ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

-

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.